ದನಕರುಗಳಿಗೂ ನೀರಿಲ್ಲದಿರುವ ಪರಿಸ್ಥಿತಿಯಾಗಿದೆ ಆದ್ದರಿಂದ ಅಲ್ಲಿಯವರೆಗೆ ಹೆಚ್ಚೆ ಬೋರ್‌ವೆಲ್‌ಗಳನ್ನು ಕೊರೆಸಿ ನೀರನ್ನು ಒದಗಿಸುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ ಆ ಸ್ಥಿತಿ ಇದ್ದರೆ ಆದಷ್ಟು ಬೇಗ ಬೋರ್‌ವೆಲ್‌ನ್ನು ಕೊರೆಸಲು ಹಣವನ್ನು ಮಂಜೂರು ಮಾಡಿಸಿಕೊಡುತ್ತೇವೆ

ಜಿಲ್ಲಾ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರಿ ವಕೀಲರನ್ನು ನೇಮಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **218(1396),**
ಸದಸ್ಯರ ಹೆಸರು **ಶ್ರೀ ಹಾಲಪ್ಪ ಹೆಚ್ (ಹೊಸನಗರ),**
ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)**

ಅ) ರಾಜ್ಯದ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳ ಮೇಲೆ ಸಾರ್ವಜನಿಕರು ವಿವಿಧ ಮೊಕದ್ದಮೆಗಳನ್ನು ಹೂಡಿದಾಗ, ಸ್ಥಳೀಯ ಸಂಸ್ಥೆಗಳ ಪರವಾಗಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ನಡೆಸಲು ಸರ್ಕಾರದ ವಕೀಲರನ್ನು ನೇಮಿಸಲಾಗುತ್ತಿದೆಯೇ,

ಜಿಲ್ಲಾ / ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸಂಸ್ಥೆಗಳಾದ್ದರಿಂದ ಸರ್ಕಾರದ ವಕೀಲರನ್ನು ನೇಮಿಸುತ್ತಿಲ್ಲ ಆದರೆ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೇ ತಮ್ಮಲ್ಲಿ ಲಭ್ಯವಿರುವ ನ್ಯಾಯವಾದಿಗಳ ಪ್ಯಾನಲ್‌ನಿಂದ ವಕೀಲರನ್ನು ನೇಮಕ ಮಾಡಲಾಗುತ್ತದೆ

ಆ) ನೇಮಿಸಿದ್ದಲ್ಲಿ, ಈ ಪಂಚಾಯತಿಗಳಲ್ಲಿ ವಿವಿಧ ಮೊಕದ್ದಮೆಗಳು ಬಾಕಿ ಇರುವ ಯಾವ ಯಾವ ಪ್ರಕರಣಗಳು ಯಾವ ಯಾವ ಹಂತದಲ್ಲಿದೆ,

ಮೂರು ಹಂತದ ಪಂ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳು ವಿವಿಧ ನ್ಯಾಯಾಲಯಗಳಲ್ಲಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ

ಇ) ನೇಮಿಸದಿದ್ದಲ್ಲಿ, ಸರ್ಕಾರಿ ವಕೀಲರನ್ನು ಯಾವಾಗ ನೇಮಿಸಲಾಗುವುದು ಸರ್ಕಾರವನ್ನು ಪ್ರತಿವಾದಿಯನ್ನಾಗಿ ಮಾಡಿದ ಪ್ರಕರಣಗಳಲ್ಲಿ ಸರ್ಕಾರಿ ವಕೀಲರನ್ನು ನೇಮಿಸಲಾಗುವುದು

ಈ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ರಿಪ್ಪನಪೇಟೆ ಗ್ರಾಮ ಪಂಚಾಯತಿ ಬರುವ ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂ 43ಕ್ಕೆ ಹೈ ಕೋರ್ಟ್‌ರಿಟ್ ಪಿಟಿಷನ್ ನಂ ಡಬ್ಲ್ಯೂಪಿ 22999 05 ಹಾಗೂ 17199 05 ಮತ್ತು 545 06

ಸಂಬಂಧಿಸಿದಂತೆ ಕಳೆದ ಒಂದು ವರ್ಷದಿಂದ ವಕೀಲರನ್ನು ನೇಮಿಸದಿರಲು ಕಾರಣವೇನು?

ಈ ಪ್ರಕರಣದಲ್ಲಿ ಸರ್ಕಾರವು ಮೊದಲನೇ ಪ್ರತಿವಾದಿಯಾಗಿದ್ದು, ಸರ್ಕಾರದ ಮಟ್ಟದಲ್ಲಿ ಈಗಾಗಲೇ ಸರ್ಕಾರಿ ವಕೀಲರನ್ನು ನೇಮಕ ಮಾಡಿ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಡೆಸಲು ಕ್ರಮ ವಹಿಸಲಾಗಿದೆ

ಶ್ರೀ ಹೆಚ್ ಹಾಲಪ್ಪ ಉತ್ತರವನ್ನು ಒದಗಿಸಿದ್ದಾರೆ ನಾನು ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ specific ಆಗಿ ಕೇಳಿದ್ದೆ ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಕೇಸ್ ಇದೆ ಇದರಲ್ಲಿ ಸರ್ಕಾರವೆ first party ಇದಕ್ಕೆ ಸರ್ಕಾರದಿಂದ ವಕೀಲರನ್ನು ನೇಮಕ ಮಾಡಿದ್ದೀರಾ ಎಂದು ಕೇಳಿದೆ ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ ಆದರೆ, ಕಳೆದ 2 ವರ್ಷಗಳಿಂದ ಆ ವಕೀಲರು ಹೈಕೋರ್ಟ್‌ಗೆ ಹೋಗಿಲ್ಲವೆಂದು ಮಾಹಿತಿ ಇದೆ ನಾನು ಈ ಪ್ರಶ್ನೆಯನ್ನು ಹಾಕುವವರೆಗೂ ವಕೀಲರು attend ಮಾಡಿರಲಿಲ್ಲ ಏಕೆ ಹಾಜರಾಗಿಲ್ಲ? ಅದರ ಆಸಕ್ತಿಯೇನು? ಊರಿನ ಮಧ್ಯದಲ್ಲಿನ 3 ಎಕರೆ ಜಮೀನಿಗೆ ಇದು ಸಬಂಧಪಟ್ಟಿದ್ದು ಏಕೆ ಇದು delay ಆಗಿದೆಯೆಂದು ಹೇಳಬೇಕು ಆ ವಕೀಲರು ಇನ್ನೂ ವಕಾಲತ್ತೇ ಹಾಕಿಲ್ಲ, ಕಳೆದ 2 ವರ್ಷದಿಂದ ಏಕೆ ಕೋರ್ಟ್‌ಗೆ ಹಾಜರಾಗಿಲ್ಲ? ಆ ವಕೀಲರ ಹೆಸರು ಮತ್ತು ಅವರು ಯಾವಾಗ ವಕಾಲತ್ತನ್ನು ಹಾಕಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಬೇಕು

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ಸಕ್ಕರೆ ಸಚಿವರು) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ವಕೀಲರನ್ನು ನೇಮಕ ಮಾಡಲು ಅವರಿಗೇ ಅಧಿಕಾರವಿದೆ ಅವರು ಸರಿಯಾದ ವಕೀಲರನ್ನಿಟ್ಟು ಕೇಸನ್ನು ನಡೆಸತಕ್ಕದ್ದು ಅವರಿಗೆ ಬಿಟ್ಟದ್ದು ಇವರು ಹೊಸನಗರ ತಾಲ್ಲೂಕಿನ ರಿಪ್ಪನಪೇಟೆ ವಿಷಯದಲ್ಲಿ ಕೇಳುತ್ತಿದ್ದಾರೆ ಅವರು ವಕೀಲರನ್ನಿಟ್ಟು ಮಾಡಿದ್ದರೆ ಸರಿಯಾಗಿರುತ್ತಿತ್ತು ಮುಂದಿನ ಸಲ ಅವರೇನು ಸಲಹೆಯನ್ನು ಕೊಡುತ್ತಾರೆ, ಅದರಂತೆ ಮಾಡಲು ಪ್ರಯತ್ನ ಪಡುತ್ತೇವೆ

ಶ್ರೀ ಹೆಚ್ ಹಾಲಪ್ಪ ಇವರು ಈ ಹಿಂದೆ ವಕೀಲರನ್ನು ಇಡಲೇ ಇಲ್ಲ ನಾವೇ ಹೋಗಿ ನ್ಯಾಯಾಲಯದಲ್ಲಿ ವಾದ ಮಾಡಿದ್ದೇವೆ ಹೈಕೋರ್ಟ್‌ನಲ್ಲಿ ಸರ್ಕಾರವನ್ನು party ಮಾಡಿದ್ದಾರೆ 2 ವರ್ಷವಾಗಿದೆ 2 ವರ್ಷವಾಗಿದ್ದರೂ ನೀವು ವಕೀಲರನ್ನು ನೇಮಕ ಮಾಡಿಲ್ಲವೆಂದರೆ ಸಾರ್ವಜನಿಕರ ಆಸ್ತಿ ಹೋಗುತ್ತಿರುವುದೇ? ಇದಕ್ಕೆ ಆಸಕ್ತಿ ಇಲ್ಲವೇ? ಅಧಿಕಾರಿಗಳೇಕೆ ಇನ್ನೂ ನೇಮಿಸಿಲ್ಲ? ತೊಂದರೆಯೇನು?

ಶ್ರೀ ಎಸ್ ಎ ರವೀಂದ್ರನಾಥ್ ಪಂಚಾಯಿತಿಯವರೇನು ಇದಕ್ಕೆ ಜವಾಬ್ದಾರರಿರುತ್ತಾರೆ ಅವರಿಂದ ವಕೀಲರಿಗೆ ಸರಿಯಾದ ಮಾಹಿತಿಯನ್ನು ಕೊಡುವ ಕೆಲಸವಾಗಬೇಕು ಅದನ್ನು ಅವರು ಮಾಡದಿದ್ದರೆ ರಾಜ್ಯದವರು ಮಾಡಲು ಸಾಧ್ಯವಿಲ್ಲ ಅದನ್ನು ಅವರು ಮಾಡಬೇಕು ಅದನ್ನು ಮುಂದಿನ ದಿನಗಳಲ್ಲಿ ಸರಿ ಮಾಡುವುದನ್ನು ಮಾಡುತ್ತೇವೆ

2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 219(1566)

ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)

ಉತ್ತರಿಸುವ ಸಚಿವರ ಹೆಸರು ಶ್ರೀ ಡಿ ಟಿ ಜಯಕುಮಾರ(ವಸತಿ ಸಚಿವರು)

ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ (ಆಂಬೇಡ್ಕರ್, ಆಶ್ರಯ, ಇಂದಿರಾ ಆವಾಸ್) ಕಡುಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಹಾಕಿಕೊಂಡಿದ್ದ ಗುರಿ ಏನು?

2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 3,40,560 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 53,299 ಮನೆಗಳ ಗುರಿಯನ್ನು ನೀಡಲಾಗಿದೆ ಮತ್ತು ನಗರ ಆಶ್ರಯ ಹಾಗೂ ಗ್ರಾಮೀಣ ಅಂಬೇಡ್ಕರ್ ಯೋಜನೆಗಳಿಗೆ ಗುರಿಯನ್ನು ನಿಗದಿಪಡಿಸಿರುವುದಿಲ್ಲ

ಆ) ಸರ್ಕಾರ ಹಾಕಿಕೊಂಡ ಗುರಿಗೆ ಅನುಗುಣವಾಗಿ ಸಾಧಿಸಲಾಗಿರುವ ಪ್ರಗತಿ ಏನು? (ಜಿಲ್ಲಾವಾರು ಮಾಹಿತಿ ನೀಡುವುದು)

2006–07ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಜಿಲ್ಲಾವಾರು ಪ್ರಗತಿಯನ್ನು ಅನುಬಂಧ "ಅ" ದಲ್ಲಿ ನೀಡಲಾಗಿದೆ

2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) ಸರ್ಕಾರ ಹಾಕಿಕೊಂಡಿರುವ ಗುರಿಯಂತೆ ಸಾಧಿಸಲಾಗಿರುವ ಪ್ರಗತಿಗಳನ್ನು ತುಲನೆ ಮಾಡಿದಾಗ ಈ ಯೋಜನೆ ಆಶಾದಾಯಕವೆಂಬಂತಾಗಿದೆಯೆ?

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2006–07ನೇ ಸಾಲಿನಲ್ಲಿ ನೀಡಲಾದ ಒಟ್ಟು 53299 ಮನೆಗಳ ಗುರಿಗೆ ಎದುರಾಗಿ 39006 ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ ಹಾಗೂ 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ

ಈ) ರಾಜ್ಯದಲ್ಲಿ ಸರ್ಕಾರ ಹಾಕಿಕೊಂಡ ವಸತಿ ಯೋಜನೆಗಳ ಗುರಿಯನ್ನು ಸಾಧಿಸದೇ ಇದ್ದಲ್ಲಿ ಅದಕ್ಕೆ ಸಕಾರಣಗಳೇನು?